ಪರಿಸ್ಥಿತಿ ಹೀಗಿರುವಾಗ ಕೆಲವು ಆಂಧ್ರ ಪ್ರದೇಶದವರು ನಮಗೆ ಪಟ್ಟು ಇದೆಯೆಂದೂ ಮೇಲ್ಕಂಡ ವ್ಯವಸಾಯಗಾರರಲ್ಲಿ ಕೆಲವು ಮುಖಂಡರುಗಳ ಮೇಲೆ ಕೋರ್ಟಿನಿಂದ ಇಂಜೆಂಕ್ಷನ್ ಆರ್ಡರ್ ತಂದು ಪೋಲೀಸಿನವರ ಸಹಾಯದಿಂದ ಮೇಲ್ಕಂಡ ನೂರಾರು ಕುಟುಂಬಗಳನ್ನು ಒಕ್ಕಲೆಬ್ಬಿಸಲು ಪ್ರಯತ್ನ ಮಾಡುತ್ತಿದ್ದಾರೆ. ಸರ್ಕಾರ ಈ ಸನ್ನಿವೇಶವನ್ನು ಗಂಭೀರವಾಗಿ ಪರಿಗಣಿಸಿ ಉಚ್ಚಾಟನೆಗೊಳಗಾಗಿರುವ ಹಿಂದುಳಿದ ಹರಿಜನರ ನೂರಾರು ಕುಟುಂಬವನ್ನು ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಹೆಚ್. ಪಟೀಲ್(ಮಾನ್ಯ ಕೈಗಾರಿಕಾ ಸಚಿವರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಸ್ತಾಪಿಸಿರತಕ್ಕ ವಿಷಯವನ್ನು ಮಾನ್ಯ ಸಚಿವರಾದ ಕಂದಾಯ ಮಂತ್ರಿಯವರ ಗಮನಕ್ಕೆ ತರುತ್ತೇನೆ.

(೯) ಕುಂದಾಪುರ ಪುರಸಭೆಯ ಮುಖ್ಯಾಧಿಕಾರಿಯವರನ್ನು ತುರ್ತಾಗಿ ವರ್ಗಾವಣೆ ಮಾಡಿರುವ ಬಗ್ಗೆ.

ಶ್ರೀ ಜಿ. ಎಸ್. ಆಚಾರ್ಯ(ಬೈಂದೂರು).—ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಸುವರ್ಣ ಮಹೋತ್ಸವ ಆಚರಿಸಿದ ಕುಂದಾಪುರ ಪುರಸಭೆ ಸಾಕಷ್ಟು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದು ಕಳೆದ ಅನೇಕ ತಿಂಗಳುಗಳಲ್ಲಿ ಅಲ್ಲಿಗೆ ಒಬ್ಬ ಚೀಫ್ ಆಫೀಸರ್‌ನ್ನು ನೇಮಿಸಲಾಯಿತು. ತೆರಿಗೆ ಹೆಚ್ಚಳ, ಆಯವ್ಯಯ ಪಟ್ಟಿ ತಯಾರಿ, ಬಾಕಿ ವಸೂಲಿ, ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಸಾರ್ವಜನಿಕ ನೆರವಿನಿಂದ ರೂಪಿಸಲಾದ ಅನೇಕ ಯೋಜನೆಗಳ ರೂಪುರೇಷೆಗಳ ತಯಾರಿಯಲ್ಲಿ ಆ ಮುಖ್ಯಾಧಿಕಾರಿಗಳಾಗಿದ್ದಾಗಲೇ ಕೇವಲ ಐದೇ ತಿಂಗಳಲ್ಲಿ ವರ್ಗಾವಣೆ ಮಾಡಲಾಯಿತು. ಅದೂ ಅತ್ಯಂತ ತುರ್ತಿನ ವರ್ಗಾವಣೆ ತಾ ೨೧ ರಂದು ಸರ್ಕಾರಿ ಆಜ್ಞೆ ತಾ, ೨೨ರಂದು ವಿಭಾಗಾಧಿಕಾರಿಗಳಿಂದ ನಿರ್ದೇಶನ ಹಾಗೂ ತಾ ೨೪ರ ರಾತ್ರಿ ತುರ್ತು ಅಧಿಕಾರದ ಹಸ್ತಾಂತರ. ವರ್ಗಾಯಿಸಲ್ಪಟ್ಟವರ ಬದಲಿಗೆ ಇನ್ನೊಬ್ಬ ಮುಖ್ಯಾಧಿಕಾರಿಗಳನ್ನು ನೇಮಿಸದೇ ಇರುವುದು. ಆಶ್ಚರ್ಯವನ್ನುಂಟು ಮಾಡಿದ್ದು ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಮಾಜಿ ಶಾಸಕಿಯೋರ್ವರ ನೇತೃತ್ವದಲ್ಲಿ ಕಾಂಗ್ರೆಸ್ ಬಹುಮತದಲ್ಲಿರುವ ಈ ಪುರಸಭೆಯ ಮೇಲೆ ರಾಜಕೀಯ ಉದ್ದೇಶದ ಕ್ರಮ ಕೈಗೊಳ್ಳಲಾಗಿದೆಯೇ ಎಂದು ಸಂದೇಹಪಡುವಂತಾಗಿದೆ. ಇದನ್ನು ನಿವಾರಿಸಲು ಆಗತ್ಯವುಳ್ಳ ಕ್ರಮ ಕೂಡಲೇ ಕೈಗೊಳ್ಳಬೇಕಾಗಿ ಕೋರುತ್ತೇನೆ.

ಶ್ರೀ ಜೆ. ಹೆಚ್. ಪಟೀಲ್.—ಈ ಮುಖ್ಯಾಧಿಕಾರಿಯನ್ನು ಸಂಬಂಧಪಟ್ಟ ಸಚಿವರು ತುರ್ತಾಗಿ ಏತಕ್ಕೆ ವರ್ಗಾವಣೆ ಮಾಡಿದರು ಎನ್ನುವ ಬಗ್ಗೆ ಸಂಬಂಧಪಟ್ಟ ಸಚಿವರು ವಿವರಣೆ ಕೊಡುವುದಕ್ಕೆ ತಿಳಿಸುತ್ತೇನೆ.

(೧೦) ಮದ್ದೂರಿನಲ್ಲಿರುವ ಬ್ರೂಕ್ ಬಾಂಡ್ ಸ್ಕೂಟರ್ ಕಾರ್ಖಾನೆಯಲ್ಲಿ ಕಾರ್ಮಿಕರ ಮುಷ್ಕರ.

ಶ್ರೀ ಎಂ. ಎಸ್. ಕೃಷ್ಣನ್(ರಾಜಾಜಿನಗರ).—ಮಾನ್ಯ ಅಧ್ಯಕ್ಷರೆ, ಮದ್ದೂರಿನಲ್ಲಿರುವ ಬ್ರೂಕ್ ಬಾಂಡ್(ಆಟೋಮೋಟಿವ್ ವಿಭಾಗದ) (ಹಿಂದೆ ಕರ್ನಾಟಕ ಸ್ಕೂಟರ್ ಎಂದು ಕರೆಯಲಾಗಿತ್ತು) ಸ್ಕೂಟರ್ ಕಂಪನಿಯಲ್ಲಿ ಸುಮಾರು ೪೦೦ ಕಾರ್ಮಿಕರು ೧೨-೧೦-೮೬ರಿಂದ ಮುಷ್ಕರ ಹೂಡಿದ್ದಾರೆ. ಮೂರು ವರ್ಷದ ನಂತರ ವೇತನ ಪುನರ್ ವಿಮರ್ಶೆ ಮಾಡಬೇಕೆಂದು ಕೇಳಿ ನೋಟೀಸ್ ಕೊಟ್ಟು ಕಾನೂನಿಗನ್ವಯ ಮುಷ್ಕರ ಹೂಡಿದ್ದಾರೆ, ೫-೬ ತಿಂಗಳಿಂದ ಮಾಲೀಕರೊಡನೆ ಮಾತುಕತೆ ನಡೆಸಿದ್ದಾಗ್ಯೂ ಏನೂ ಫಲಕಾರಿಯಾಗದೆ ಅನ್ಯಮಾರ್ಗವಿಲ್ಲದೆ ಕಾರ್ಮಿಕರು ಮುಷ್ಕರ ಕೊಡಬೇಕಾಗಿ ಬಂದಿದೆ. ಮಾಲೀಕರಾಗಲಿ, ಸರ್ಕಾರವಾಗಲಿ ಈ ಕಾರ್ಮಿಕರ ಹೇಳಿಕೆಯ ಬಗ್ಗೆ ಗಮನಹರಿಸಿ ಇತ್ಯರ್ಥ ಮಾಡುವ ಯಾವ ಪರಿಣಾಮಕಾರಿಯಾದ ಕಾರ್ಯಕ್ರಮವನ್ನೂ ಕೈಗೊಂಡಿಲ್ಲ. ಪರಿಣಾಮ ಕಾರ್ಮಿಕರುಗಳ ನರಳಬೇಕಾಗಿದೆ. ತೊಂದರೆಗೀಡಾಗಬೇಕಾಗಿದೆ. ಸರ್ಕಾರ ಈ ವಿಷಯದಲ್ಲಿ ಏನು ಕಾರ್ಯಕ್ರಮ ಕೈಗೊಂಡಿದೆ ಎಂಬುದರ ಬಗ್ಗೆ ಹೇಳಿಕೆಯನ್ನು ಮಾನ್ಯ ಕಾರ್ಮಿಕ ಮಂತ್ರಿಗಳು ನೀಡಬೇಕಾಗಿದೆ.